<u>2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .</u>

SC. No.165-2022

ದೋ.ಸಾ. 3
ಫ್ರಾ.ಸಾ. 9
ಪ್ರ.ವ.ಬೊ.ದಿನಾಂಕ. 29-10-2025

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಅನಿಲ |
| ತಂದೆ / ಗಂಡನ ಹೆಸರು | - | ಹೇಮಣ್ಣ |
| ವಯಸ್ಸು | - | 31 |
| ಉದ್ಯೋಗ | - | ಚಾಲಕ |
| ವಾಸ ಸ್ಥಳ | - | ದಾವಣಗೆರೆ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತನ ಪರಿಚಯ ಇರುವುದಿಲ್ಲ. ಈಗ ನೋಡುತ್ತಿರುವ ನಿ.ಪಿ.16 ಮತ್ತು 18 ರಲ್ಲಿ ಇರುವ ಸಹಿ ನನ್ನದು. ಅದೇ ರೀತಿ ಈಗ ನೋಡುತ್ತಿರುವ ಇನ್ನೆರಡು ದಾಖಲೆಗಳಲ್ಲಿ ಇರುವ ಸಹಿ ನನ್ನದು. ಸದರಿ ದಾಖಲೆಗಳಿಗೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದು, ಅವುಗಳಲ್ಲಿ ಬರೆದಿರುವ ವಿಚಾರ ನನಗೆ ತಿಳಿದಿರುವುದಿಲ್ಲ. ಸದರಿ ಎರಡು ದಾಖಲೆಗಳು ನೋಟೀಸು ಆಗಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ.21 ಮತ್ತು 22 ಎಂದು ಹಾಗೂ ನಿ.ಪಿ.16, 18, 21 ಮತ್ತು 22 ರಲ್ಲಿ ಇರುವ ಸಹಿಗಳನ್ನು ಕ್ರಮವಾಗಿ ನಿ.ಪಿ.16(ಬಿ), 18(ಬಿ), 21(ಎ) ಮತ್ತು 22(ಎ) ಎಂದು ಗುರುತಿಸಲಾಯಿತು. ನನಗೆ ನಿ.ಪಿ.4 ರಲ್ಲಿ ಕಾಣುತ್ತಿರುವ ಮೋಟಾರ್ ಬೈಕ್ ಆಗಲಿ ಹಾಗೂ ಮು.ಮಾ.8 ರಿಂದ 11 ರ ಕುರಿತಾಗಿ ತಿಳಿದಿರುವುದಿಲ್ಲ. ಮು.ಮಾ.9 ಮತ್ತು 11 ರ ಮೇಲೆ ಇರುವ ಸಹಿ ನನ್ನದು. ಅದನ್ನು ಕೂಡ ನಾನು ಠಾಣೆಯಲ್ಲಿ ಮಾಡಿದ್ದು, ಅವುಗಳಲ್ಲಿರುವ ಸಹಿಗಳನ್ನು ಕ್ರಮವಾಗಿ ಮು.ಮಾ.9(ಬಿ) ಮತ್ತು 11(ಬಿ) ಎಂದು ಗುರುತಿಸಲಾಯಿತು. ನಿ.ಪಿ.19 ಮತ್ತು 20 ರಲ್ಲಿ ನಾನು ಕಾಣುತ್ತಿದ್ದೇನೆ ಎಂದರೆ ಸರಿ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಪೋಲೀಸರು ಸ್ವಾಧೀನಪಡಿಸಿಕೊಂಡಿರುವುದಿಲ್ಲ.

( ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ದಿಃ 16-10-2020 ರಂದು ಪೋಲೀಸರು ನನಗೆ ನಿ.ಪಿ.21 ರಂತೆ ನೋಟೀಸನ್ನು ನೀಡಿ ಠಾಣೆಗೆ ಕರೆಯಿಸಿದಾಗ ಅಲ್ಲಿ ಇದ್ದ ಆರೋಪಿತರು ಠಾಣಾ ಆವರಣದಲ್ಲಿ ಇದ್ದ ನಿ.ಪಿ.4 ರಲ್ಲಿ ಕಾಣುತ್ತಿರುವ ಬೈಕನ್ನು ಹಾಜರುಪಡಿಸಿದ್ದು, ಆಗ ಪೋಲೀಸರು ನಿ.ಪಿ.16 ರಂತೆ ಪಂಚನಾಮೆಯನ್ನು ಬರೆದು, ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಮರುದಿನ ಪುನಃ ನನಗೆ ನಿ.ಪಿ.22 ರಂತೆ ನೋಟೀಸನ್ನು ಜಾರಿ ಮಾಡಿ ಅಲ್ಲಿಂದ ತ್ರಿಶೂಲ್ ಟಾಕೀಸಿನ ಬಳಿ ಕರೆದುಕೊಂಡು ಹೋದಾಗ ಅಲ್ಲಿ ಚಾ.ಸಾ.10 ರವರು ತೋರಿಸಿದ ಸ್ಥಳದಲ್ಲಿ ನಿ.ಪಿ.18 ರಂತೆ ಪಂಚನಾಮೆಯನ್ನು ಬರೆದು ನನ್ನ ಸಹಿ ಅಲ್ಲಿಯೇ ಪಡೆದುಕೊಂಡಿರುತ್ತಾರೆ

ಎಂದರೆ ಸರಿಯಲ್ಲ. ಆ ಸಮಯದಲ್ಲಿ ಮು.ಮಾ.8 ಮತ್ತು 10 ನ್ನು ವಶಕ್ಕೆ ಪಡೆದು, ಮು.ಮಾ.9 ಮತ್ತು 11 ರಲ್ಲಿ ಇಟ್ಟು ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿ.ಪಿ.19 ಮತ್ತು 20 ರಂತೆ ಪೋಟೋ ತೆಗೆದಿದ್ದಾರೆ ಎಂದರೆ ಸರಿಯಲ್ಲ. ಈಗ ಆರೋಪಿತರಿಗೆ ಸಹಾಯ ಮಾಡಲು ನಾನು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಬರೆಯಲಾಗಿಲ್ಲ ಎಂದು ಹಾಗೂ ಬೈಕನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ.**

ಇರುವುದಿಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

PRAVEEN KUMAR RAGHAV NAIK

Digitally signed by PRAVEEN KUMAR RAGHAV NAIK
Date: 2025.10.31 11:50:42 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .

SC. No.165-2022

ದೋ.ಸಾ. 2
ಫ್ರಾ.ಸಾ. 8
ಪ್ರ.ವ.ಬೊ.ದಿನಾಂಕ. 29-10-2025

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಅಮರ್ ನಾಥ |
| ತಂದೆ / ಗಂಡನ ಹೆಸರು | - | ಆಂಜಿನಪ್ಪ |
| ವಯಸ್ಸು | - | 31 |
| ಉದ್ಯೋಗ | - | ಸೆಕ್ಯೂರಿಟಿ ಗಾರ್ಡ್ |
| ವಾಸ ಸ್ಥಳ | - | ದಾವಣಗೆರೆ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನನಗೆ ಚಾ.ಸಾ.3 ರವರ ಪರಿಚಯ ಇರುತ್ತದೆ. ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತನನ್ನು ನೋಡಿದ ನೆನಪು ಇರುವುದಿಲ್ಲ. ನನ್ನ ಹಾಗೂ ಚಾ.ಸಾ.3 ರವರ ಮನೆಯು ಕೆಟಿಜೆ ನಗರ ಠಾಣೆಯ ಪಕ್ಕದಲ್ಲಿ ಇದ್ದು, ಸುಮಾರು 4-5 ವರ್ಷಗಳ ಹಿಂದೆ ನನ್ನನ್ನು ಮತ್ತು ಚಾ.ಸಾ.3 ರವರನ್ನು ಠಾಣೆಗೆ ಕರೆಯಿಸಿ ಅಲ್ಲಿಂದ ತ್ರಿಶೂಲ್ ಟಾಕೀಸಿನ ಬಳಿ ಕರೆದುಕೊಂಡು ಹೋಗಿದ್ದು, ಅಲ್ಲಿ ಯಾವುದೋ ಒಬ್ಬ ವ್ಯಕ್ತಿಯು ಪೋಲೀಸರಿಗೆ ಸ್ಥಳ ತೋರಿಸಿದ್ದು, ಆಗ ಪೋಲೀಸರು ಇದೇ ಸ್ಥಳದಲ್ಲಿ ನಿನ್ನೆಯ ದಿನ ಗಲಾಟೆಯಾಗಿತ್ತು ಎಂದು ಹೇಳಿ ನಮ್ಮನ್ನು ನಿಲ್ಲಿಸಿ ಪೋಟೋ ತೆಗೆದುಕೊಂಡಿದ್ದು, ನಂತರ ಸಂಜೆ ಠಾಣೆಗೆ ಕರೆಯಿಸಿ ನನ್ನ ಮತ್ತು ಚಾ.ಸಾ.3 ರವರ ಸಹಿಗಳನ್ನು ದಾಖಲೆಗಳಿಗೆ ಪಡೆದುಕೊಂಡಿರುತ್ತಾರೆ. ಠಾಣೆಯಲ್ಲಿ ಪೋಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ. ಆದರೆ ತ್ರಿಶೂಲ್ ಟಾಕೀಸ್ ಬಳಿ ಕೆಲವೊಂದು ಮಣ್ಣನ್ನು ಸ್ವಾಧೀನಕ್ಕೆ ಪಡೆದುಕೊಂಡಿರುತ್ತಾರೆ. ನಮಗೆ 1 ನೇ ಆರೋಪಿಯು ಠಾಣೆಯಲ್ಲಿ ಯಾವುದೇ ಬೈಕನ್ನು ತೋರಿಸಿದ್ದು ಇರುವುದಿಲ್ಲ. ನನಗೆ ಈಗ ತೋರಿಸುತ್ತಿರುವ ನಿ.ಪಿ.4 ರಲ್ಲಿ ಕಾಣುವ ಬೈಕಿನ ವಿಚಾರ ತಿಳಿದಿರುವುದಿಲ್ಲ. ಸಾಕ್ಷಿಯು ನಾಲ್ಕು ದಾಖಲೆಗಳಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅವುಗಳು ಕ್ರಮವಾಗಿ ದಿಃ 16-10-2020 ರಂದು ನೀಡಲಾದ ನೋಟೀಸು ಹಾಗೂ ಅಮಾನತು ಪಂಚನಾಮೆಗಳಾಗಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ.15 ಮತ್ತು 16 ಎಂದು ಹಾಗೂ ದಿಃ 17-10-2020 ರಂದು ನೀಡಲಾದ ನೋಟೀಸು ಹಾಗೂ ಅಮಾನತು ಪಂಚನಾಮೆಗಳಾಗಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ.17 ಮತ್ತು 18 ಎಂದು ಹಾಗೂ ಅವುಗಳಲ್ಲಿ ಇರುವ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿ.ಪಿ.15(ಎ) ದಿಂದ 18(ಎ) ಎಂದು ಗುರುತಿಸಲಾಯಿತು. ಅಲ್ಲದೇ ಎರಡು ಪೋಟೋಗಳನ್ನು ನಿ.ಪಿ.19 ಮತ್ತು 20 ಎಂದು ಗುರುತಿಸಲಾಯಿತು. ಸದರಿ ನಿ.ಪಿ.16 ಮತ್ತು 18 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ತಿಳಿದಿರುವುದಿಲ್ಲ. ಈಗ ಸಾಕ್ಷಿಗೆ ಆರೋಪಿತರ ಪರ ವಕೀಲರ ಸಮಕ್ಷಮದಲ್ಲಿ ಎರಡು ಬಿಳಿಯ ಚೀಲವನ್ನು ತೆರೆದು ಅದರಲ್ಲಿ ಇರುವ ಸಾದಾ ಮಣ್ಣು ಹಾಗೂ ರಕ್ತ ಮಿಶ್ರಿತ ಮಣ್ಣನ್ನು ತೋರಿಸಲಾಗಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ಸಾದಾ ಮಣ್ಣನ್ನು ಮು.ಮಾ.8 ಎಂದು, ಅದನ್ನು ಇಡಲಾದ ಚೀಲವನ್ನು ಮು.ಮಾ.9 ಎಂದು ಗುರುತಿಸಲಾಯಿತು. ರಕ್ತ ಮಿಶ್ರಿತ ಮಣ್ಣನ್ನು ಮು.ಮಾ.10

ಎಂದು ಹಾಗೂ ಅದನ್ನು ಇಡಲಾದ ಚೀಲವನ್ನು ಮು.ಮಾ.11 ಎಂದು, ಮು.ಮಾ.9 ಮತ್ತು 11 ರ ಮೇಲೆ ಇರುವ ಸಾಕ್ಷಿಯ ಸಹಿಗಳನ್ನು ಮು.ಮಾ.9(ಎ) ಮತ್ತು 11(ಎ) ಎಂದು ಗುರುತಿಸಲಾಯಿತು.

( ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ದಿಃ 16-10-2020 ರಂದು ಪೋಲೀಸರು ನನಗೆ ಮತ್ತು ಚಾ.ಸಾ.3 ರವರಿಗೆ ನಿ.ಪಿ.15 ರಂತೆ ನೋಟೀಸನ್ನು ನೀಡಿ ಠಾಣೆಗೆ ಕರೆಯಿಸಿದಾಗ ಅಲ್ಲಿ ಇದ್ದ ಆರೋಪಿತರು ಠಾಣಾ ಆವರಣದಲ್ಲಿ ಇದ್ದ ನಿ.ಪಿ.4 ರಲ್ಲಿ ಕಾಣುತ್ತಿರುವ ಬೈಕನ್ನು ಹಾಜರುಪಡಿಸಿದ್ದು, ಆಗ ಪೋಲೀಸರು ನಿ.ಪಿ.16 ರಂತೆ ಪಂಚನಾಮೆಯನ್ನು ಬರೆದು, ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಮರುದಿನ ಪುನಃ ನನಗೆ ಮತ್ತು ಚಾ.ಸಾ.3 ರವರಿಗೆ ನಿ.ಪಿ.17 ರಂತೆ ನೋಟೀಸನ್ನು ಜಾರಿ ಮಾಡಿ ಅಲ್ಲಿಂದ ತ್ರಿಶೂಲ್ ಟಾಕೀಸಿನ ಬಳಿ ಕರೆದುಕೊಂಡು ಹೋದಾಗ ಅಲ್ಲಿ ಚಾ.ಸಾ.10 ರವರು ತೋರಿಸಿದ ಸ್ಥಳದಲ್ಲಿ ನಿ.ಪಿ.18 ರಂತೆ ಪಂಚನಾಮೆಯನ್ನು ಬರೆದು ನನ್ನ ಸಹಿ ಅಲ್ಲಿಯೇ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈಗ ಆರೋಪಿತರಿಗೆ ಸಹಾಯ ಮಾಡಲು ನಾನು ನನ್ನಸಮಕ್ಷಮ ಯಾವುದೇ ಪಂಚನಾಮೆ ಬರೆಯಲಾಗಿಲ್ಲ ಎಂದು ಹಾಗೂ ಬೈಕನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ.**

ಇರುವುದಿಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

PRAVEEN KUMAR RAGHAV NAIK
Digitally signed by PRAVEEN KUMAR RAGHAV NAIK
Date: 2025.10.31 11:50:51 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.